ಸಾರಾಯಿ ಪಾಕೇಟ್‌ಗಳು, ಬೀಡಿ ಮೋಟುಗಳನ್ನು ಎತ್ತಾಕುತ್ತಿದ್ದ ಮೇಷ್ಟ್ರು ಕಾಲ ಬದಲಾದಂತೆ ವಿಂಡ್ರು, ಸಿಗರೇಟ್ ಮೋಟು, ಬೀರು ಬಾಟಲ್‌ಗಳನ್ನ ಎತ್ತಾಕತೊಡಗಿದ್ದರು. 'ಇಪ್ಪತ್ತೈದು ವರ್ಷದಿಂದ ಗೂಟ ಬಡ್ಕಂಡು ಇಲ್ವ, ಅದ್ಯಾಕೆ ಇರೋದು, ಎತ್ತಾಕ್ತರೆ ತಗ' ಎಂದು ಹಿಂದೆ ಇವರಿಂದ ಏಟು ತಿನ್ನಿಸಿಕೊಳ್ಳುತ್ತಿದ್ದ ಹಳೆ ವಿದ್ಯಾರ್ಥಿಗಳು ಹಗುರವಾಗಿ ಮಾತಾಡಿ ಸೇಡು ತೀರಿಸಿಕೊಳ್ಳುತ್ತಿದ್ದರು. ಇಷ್ಟೊಂದು ದೀರ್ಘ ಕಾಲ ಒಂದೇ ಸ್ಕೂಲಲ್ಲಿ ಇದ್ದ ಮೇಷ್ಟ್ರು 'ಯಾವಾನ್ರುಲ ನಿಮ್ಗೆಲ್ಲ ಬುದ್ಧಿ ಕಲಿಸಿತ್ತು' ಎಂದು ಬೈದೋಡಿಸುವ ಹಕ್ಕನ್ನೂ ಕಳೆದುಕೊಂಡಿದ್ದರು.

ಹೂ ಅನ್ನದೆ, ಹುಹೂ ಅನ್ನದೆ ಸತತವಾಗಿ ಎತ್ತಾಕುವ ಕಾಯಕ ಮಾಡಿಕೊಂಡೇ ಬಂದಿದ್ದ ಮೇಷ್ಟ್ರಿಗೆ ಅದ್ಯಾವಾಗ ಸ್ವಾಭಿಮಾನ ಕೆರಳಿತೊ, ಬಹುಶಃ ಪಕ್ಕದ ಶಾಲೆಗೆ ಈಗಿನ್ನ ಬಂದಿರುವ ಹೊಸಮೇಷ್ಟ್ರು ಉತ್ತಮ ಶಾಲಾ ಪರಿಸರ ನಿರ್ಮಾಣ ಮಾಡಿದ್ದಾರೆಂದು ಪ್ರಶಸ್ತಿಗೆ ಬಾಜನರಾದುದು ಸ್ಫೂರ್ತಿಯಾಯಿತೇನೊ! ಇನ್ನು ಮುಂದೆ ಕುಡಿದು ಬಿಸಾಡಿರೋದನ್ನ ನಾನು ಎತ್ತಾಕಲ್ಲ, ನಿರ್ಲಜ್ಜ ಕುಡುಕರಿಗೆ ಸರಿಯಾಗಿ ಬುದ್ದಿಕಲಿಸುತ್ತೇನೆಂದು ನಿವೃತ್ತಿಗೆ ಹತ್ತಿರವಿರುವ ತಿಮ್ಮಪ್ಪನವರು ಹಟ ತೊಟ್ಟವರಂತೆ ಪಂಚಾಯ್ತಿಗೆ ಅರ್ಜಿ ಕೊಟ್ಟು, 'ಹೀಗೆಲ್ಲ ಆಗ್ತಾ ಇದೆ ಶಾಲಾ ಪರಿಸರದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ಕೊಡಿ' ಎಂದು ಬರೆದು ಹೊತ್ತಾಕಿದರು. ಈ ಅರ್ಜಿಯನ್ನು ಪಿಡಿಒರವರು ಸೀರಿಯಸ್ಸಾಗಿ ಪರಿಗಣಿಸಲೂ ಒಂದು ಕಾರಣವಿತ್ತು. ಅಧ್ಯಕ್ಷ ಹೇಳಿದ್ಕೆಲ್ಲ ಸೈನ್ ಹಾಕಿ ಅಕ್ರಮದಲ್ಲಿ ಪಿಡಿಒನು ಪಾಲುದಾರನಾಗಿದ್ದಾನೆಂದು ಮೀಟಿಂಗ್‌ಗಳಲ್ಲಿ ಸದಾ ಮೈಮೇಲೆ ಬೀಳುತ್ತಿದ್ದ ಕೆಲ ಗ್ರಾಮಪಂಚಾಯ್ತಿ ಮೆಂಬರ್‌ಗಳೂ ರಾತ್ರಿನೊತ್ತು ಸ್ಕೂಲ್ ಮುಂದೆ ಕೂತ್ಕಂಡು ಕುಡಿಯುತ್ತಿರುತ್ತಾರೆಂಬ ಸುಳಿವು ಅವರಿಗೆ ಸಿಕ್ಕಿತ್ತು. ಆದ್ದರಿಂದ ತಕ್ಷಣವೇ ಹೋಬಳಿ ಕೇಂದ್ರದಲ್ಲಿದ್ದ ಉಪ ಪೋಲೀಸ್ ಠಾಣೆಗೆ ಕರೆ ಮಾಡಿ ಸಬ್‌ಇನ್‌ಸ್ಪೆಕ್ಟರ್‌ಗೆ ರಾತ್ರಿ ಹೊತ್ತು ಈಕಡೆ ಬಂದೋಗಿ ಎಂದು ಹೇಳಿದ್ದರು. ಅದರಂತೆ ಒಂದು ರಾತ್ರಿ ಒಂಬತ್ತರ ಸುಮಾರಿಗೆ ಬೈಕ್‌ನಲ್ಲಿ ಬಂದ ಇಬ್ಬರು ಪೀಸಿಗಳು ಸ್ಕೂಲ್ ಜಗಲಿ ಮೇಲೆ ಕುಡಿಯುತ್ತ ಕೂತಿದ್ದ ಗುಂಪುಗಳ ಮೇಲೆ ಲಾಟಿ ಬೀಸಿ ಒಂದಿಬ್ಬರ ಕುಂಡಿಗಳು ಊದುವಂತೆ ಮಾಡಿದ್ದರು. ಎದ್ನೋ ಬಿದ್ನೋ ಎಂದು ಚಲ್ಲಾಪಿಲ್ಲಿಯಾದ ಗುಂಪು ತಾವು ಅರ್ಧಂಬರ್ಧ ಕುಡಿದದ್ದು, ಸೇದಿದ್ದನ್ನೆಲ್ಲ ಅಲ್ಲೆ ಬಿಟ್ಟದ್ದರು.

ಬೆಳಗ್ಗೆ ಮಾರ್ನಿಂಗ್ ಕ್ಲಾಸ್ ಇದ್ದುದರಿಂದ ಬೇಗ ಬಂದ ಮೇಷ್ಟ್ರಿಗೆ ಅಂದು ಅಲ್ಲಿ ಚಲ್ಲಾಪಿಲ್ಲಿಯಾಗಿರುವ ಅರ್ಧಂಬರ್ಧ ಕುಡಿತಾರ್ಥಗಳು ರಾತ್ರಿ ನಡೆದಿರಬಹುದಾದ ಘಟನೆಯ ಕಥೆ ಹೇಳಿದವು. ಲಾಭವೆಂಬಂತೆ ಎರಡು ಬೀರು ಬಾಟಲಿಗಳು ಬಿಲ್ಕೆ ಓಪನ್ ಆಗದ ರೀತಿಯಲ್ಲೇ ಇದ್ದುದರಿಂದ ಮೇಷ್ಟ್ರು ಅವೆರಡನ್ನೂ ಹಿಡಿದುಕೊಂಡು ಹೋಗಿ ಆಫೀಸ್ ರೂಮಿನ ಶೆಲ್ಫ್ ಮೇಲೆ ಇಟ್ಟು ಬಂದು ಉಳಿದದ್ದನ್ನೆಲ್ಲ ಗುಡಿಸಿ ಸಾರಿಸಿ ಸರಿಮಾಡಿದರು. ಕುಡುಕ ಹಳೆ ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾಟಿ ಬೀಸಿದ್ದಕ್ಕಿಂತ ಈ ಮೇಷ್ಟ್ರು ನಾವು ತಂದಿದ್ದ ಬೀರು ಬಾಟ್ಲಿಗಳನ್ನ ಆಫೀಸ್ ರೂಮಲ್ಲಿ ಮಡಿಕಂಡವ್ರಲ್ಲ ಎಂಬುದು ಕೋಪ ನೆತ್ತಿಗೇರುವಂತೆ ಮಾಡಿ ಮೇಷ್ಟ್ರಿಗೆ ಬುದ್ದಿಕಲಿಸಲು ತೀರ್ಮಾನಿಸಿದ್ದರು. ಇನ್ನೊಂದು ರಾತ್ರಿ ಆಫೀಸ್ ರೂಮ್ ಕಿಟಕಿ ಸಂದಿಲಾಸಿ ತಮ್ಮ ಮೊಬೈಲ್ ಕ್ಯಾಮರ ತೂರಿಸಿ ಹೆಡ್ ಮೇಷ್ಟ್ರು ಕುರ್ಚಿ ಪಕ್ಕದಲ್ಲಿದ್ದ ಶೆಲ್ಫ್‌ನಲ್ಲಿ ಎರಡು ಬೀರು ಬಾಟ್ಲಿಗಳಿರುವ ಫೋಟೊವನ್ನ ಸೆರೆ ಹಿಡಿದುಕೊಂಡರು. ಆ ಫೋಟೊದಲ್ಲಿ ಬ್ಲಾಕ್ ಬೋರ್ಡ್, ಅದರ ಮೇಲೆ ಬರೆದಿರುವ ಶಾಲೆಯ ಹೆಸರು, ಟೇಬಲ್ಲು ಕುರ್ಚಿ ಇದೆಲ್ಲವೂ ಸೆರೆಯಾಗಿ ಇದು ಸ್ಕೂಲ್ ಕಮ್ ಬಾರು ಇದರ ಪ್ರೊಪ್ರೇಟರ್ 'ಮುಖ್ಯಶಿಕ್ಷಕ ಶ್ರೀ ತಿಮ್ಮಪ್ಪನವರು' ಎಂಬುದು ಸ್ಪಷ್ಟವಾಗಿ ಕಾಣುವಂತಿತ್ತು.

ಹೊಸದಾಗಿ ಪೊರಕೆ ಸಾಹೇಬ್ರು ಬಂದವ್ರಂತೆ ಬಾಳ ಸ್ಟ್ರಿಕ್ಟ್ ಅಂತೆ ಎಂಬುದನ್ನ ಪತ್ತೆ ಹಚ್ಚಿಕೊಂಡ ತಿಮ್ಮಪ್ಪ ಮೇಷ್ಟ್ರ ಹಳೆ ವಿದ್ಯಾರ್ಥಿಗಳು ಮೇಷ್ಟ್ರ ಮೇಲೆ ದೂರು ಅರ್ಜಿಯೊಂದನ್ನ ರೆಡಿ ಮಾಡಿದರು. ನಮ್ಮೂರಿನ ಶಾಲೆಯಲ್ಲಿ ಇಪ್ಪತ್ತೈದು ವರ್ಷಗಳಿಂದ ಬೀಡು ಬಿಟ್ಟಿರುವ ಮೇಷ್ಟ್ರು ಶಾಲೆಗೆ ಸರಿಯಾಗಿ ಬರುತ್ತಿಲ್ಲ, ಮಕ್ಕಳಿಗೆ ಏನನ್ನೂ ಕಲಿಸುತ್ತಿಲ್ಲ, ಮೇಲಾಗಿ ಶಾಲೆಗೆ ಕುಡಿದು ಬಂದು ಮಕ್ಕಳೆಂಬುದನ್ನೂ ನೋಡದೆ ಹಿಗ್ಗಾಮುಗ್ಗ ಹೊಡೆಯುತ್ತಾರೆ. ಹನ್ಸು ಪಾನ್ ಪರಾಗ್ ಹಾಕಿಕೊಂಡು ಎಲ್ಲೆಂದರಲ್ಲಿ ಉಗಿದುಕೊಂಡು ತಿರುಗಾಡುತ್ತಾರೆ. ಇಂಥ ಬೇಜವಾಬ್ದಾರಿ ಮೇಷ್ಟ್ರನ್ನ